ಹೊನ್ನಾವರ ತಾಲ್ಲೂಕಿನಲ್ಲಿ ಸೇತುವೆಗಳ ದುರಸ್ತಿ ಬಗ್ಗೆ

೨೨೮. ಶ್ರೀ ಎಂ. ಪಿ ಕರ್ಕಿ (ಕುಮಟ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಲೋಕೋಪಯೋಗಿ, ನೀರಾವರಿ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ :—

ಅ) ೧೯೭೮ರಲ್ಲಿ ಹೊನ್ನಾವರ ತಾಲ್ಲೂಕಿನ ಹೊನ್ನಾವರ ಹೆಬ್ಬಾನಕೆರೆ ರಸ್ತೆಯ ಮೇಲಿನ ಸೇತುವೆ ನೆರೆಯಲ್ಲಿ ಸಂಪೂರ್ಣವಾಗಿ ನಾಶವಾಗಿದ್ದು ಹಾಗೂ ೧೯೮೧ರಿಂದ ಕುಮಟಾ ತಾಲ್ಲೂಕಿನ ಕುಮಟಾ ಕಲ್ಲಬ್ಬೆ ರಸ್ತೆಯಲ್ಲಿನ ಸೇತುವೆ ವಾಹನ ಓಡಾಟಕ್ಕೆ ನಿರುಪಯುಕ್ತವಾದುದ್ದು ಸರ್ಕಾರದವರ ಗಮನಕ್ಕೆ ಬಂದಿದೆಯೇ ;

ಆ) ಸರ್ಕಾರದವರು ಈ ಬಗ್ಗೆ ಯಾವ ಕ್ರಮಗಳನ್ನು ಕೈಗೊಂಡಿದ್ದಾರೆ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಸರ್ಕಾರದ ಗಮನಕ್ಕೆ ಬಂದಿದೆ.

ಆ) ಆರ್ಥಿಕ ಪರಿಸ್ಥಿತಿಯನ್ನವಲಂಬಿಸಿ ಸೇತುವೆಗಳನ್ನು ತೆಗೆದು ಕೊಳ್ಳಲಾಗುವುದು.

ವಿಷಯ :—ಬಟ್ಕಳ, ಹೊನ್ನಾವರ, ಕುಮಟಾ ತಾಲ್ಲೂಕುಗಳಲ್ಲಿ ಲೋಕೋಪಯೋಗಿ ರಸ್ತೆಗಳ ಕುರಿತು.

೩೦೬ (೨೮೧) ಶ್ರೀ ಆರ್. ಎನ್. ನಾಯ್ಕ (ಭಟ್ಕಳ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ :—

ಅ) ಲೋಕೋಪಯೋಗಿ ಕಕ್ಷೆಯಲ್ಲಿ ಬರುವ ಭಟ್ಕಳ, ಹೊನ್ನಾವರ, ಕುಮಟಾ ತಾಲ್ಲೂಕುಗಳಲ್ಲಿ ಅನುಕ್ರಮವಾಗಿ ರಸ್ತೆಗಳ ಉದ್ದ ಕಿ.ಮೀ.ಗಳಲ್ಲಿ ಎಷ್ಟು ;

ಆ) ಭಟ್ಕಳ, ಹೊನ್ನಾವರ, ಕುಮಟಾ ಮತ್ತು ಶಿವಮೊಗ್ಗ ತಾಲ್ಲೂಕುಗಳಲ್ಲಿ ಎಷ್ಟು ಕಿ. ಮೀ. ಡಾಂಬರ್ ರಸ್ತೆಗಳಿರುತ್ತವೆ :

ಇ) ಮೇಲ್ಕಾಣಿಸಿದ ಮೂರು ತಾಲ್ಲೂಕುಗಳಲ್ಲಿ ಎಷ್ಟು ಕಿ.ಮೀ. ರಸ್ತೆಗಳು ತಾಲೂಕ್ ಬೋರ್ಡ್ ಹಾಗೂ ಪಂಚಾಯತಿಗಳ ಕಕ್ಷೆಯಲ್ಲಿ ಬರುತ್ತವೆ;

ಈ) ಈ ವರ್ಷ ಹೊನ್ನಾವರ ತಾಲ್ಲೂಕಿನಲ್ಲಿ ಎಷ್ಟು ಕಿ.ಮೀ. ರಸ್ತೆಗಳನ್ನು ಟಿ. ಡಿ. ಬಿ. ಇಂದ ಲೋಕೋಪಯೋಗಿ ಖಾತೆಗೆ ಕೊಡಲಾಗಿದೆಯು ?

ಶ್ರೀ ಎಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ೧) ಭಟ್ಕಳ ; ೧೩೮ ಮೀ.
೨) ಹೊನ್ನಾವರ : ೨೦೩ ಕಿ.ಮೀ.
೩) ಕುಮಟಾ : ೨೩೪ ಕಿ.ಮೀ.

ಆ) ೧) ಭಟ್ಕಳ ; ೫೯ ಕಿ.ಮೀ.
೨) ಹೊನ್ನಾವರ : ೭೫ ಕಿ.ಮೀ.
೩) ಕುಮಟಾ : ೧೨೦ ಕಿ.ಮೀ.
೪) ಶಿವಮೊಗ್ಗ : ೧೮೦.೫೦ ಕಿ.ಮೀ

ಇ) ೧) ಭಟ್ಕಳ ; ೪೨ ಕಿ.ಮೀ.
೨) ಹೊನ್ನಾವರ : ೮೬ ಕಿ.ಮೀ.
೩) ಕುಮಟಾ : ೪೩ ಕಿ.ಮೀ.

ಈ) ಈ ವಿಷಯವು ಪರಿಶೀಲನೆಯಲ್ಲಿದೆ.